ತಾಂತ್ರಿಕ ಶಿಕ್ಷಣ ಇಲಾಖೆ
ರಾಷ್ಟ್ರೀಯ ಸೇವಾ ಯೋಜನೆ

ಸಂಖ್ಯೆ:ಡಿಟಿಇ/ಎನ್‌ಎಸ್‌ಎಸ್/01/ಐಡಿಪಿ/2023-24

ಆಯುಕ್ತರ ಕಛೇರಿ,
ಅರಮನೆ ರಸ್ತೆ, ಬೆಂಗಳೂರು -01
ದಿನಾಂಕ:16.02.2024

## ಸುತ್ತೋಲೆ

ವಿಷಯ: ಸಂವಿಧಾನದ ಕುರಿತು ಜಾಗೃತಿ ಜಾಥಾ ಸಂವಾದ ಹಾಗೂ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಬಗ್ಗೆ.

ಉಲ್ಲೇಖ: ರಾಜ್ಯ ಸರ್ಕಾರದ ಪತ್ರ ಸಂಖ್ಯೆಯುಸೇಇ/ರಾ.ಸೇ.ಯೋ/19/2021/2023-24/497 ದಿನಾಂಕ: 06.02.2024

*****

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ ಭಾರತದ ಸಂವಿಧಾನ ಅಂಗೀಕರಿಸಿಕೊಂಡು 75ನೇ ವರ್ಷದ ಆಚರಣೆಯ ಪ್ರಯುಕ್ತ ಕರ್ನಾಟಕ ಸರ್ಕಾರವು, ಸಮಾಜ ಕಲ್ಯಾಣ ಇಲಾಖೆ ಹಾಗೂ ಇತರ ಇಲಾಖೆಗಳ ಸಹಭಾಗಿತ್ವದಲ್ಲಿ ಪ್ರತಿ ನಗರ,ಗ್ರಾಮ, ಹಳ್ಳಿ, ಹಾಡಿ, ಹಟ್ಟಿ ಬಡಾವಣೆಗಳಲ್ಲಿ ಸಂವಿಧಾನದ ಬಗ್ಗೆ ಅರಿವು ಮೂಡಿಸುವ ಉದ್ದೇಶದಿಂದ "ಸಂವಿಧಾನ ಜಾಗೃತಿ ಜಾಥ" ದೊಂದಿಗೆ "ಸಂವಿಧಾನ ಮತ್ತು ಭಾರತದ ಐಕ್ಯತ ಸಮಾವೇಶ" ವನ್ನು ಆಯೋಜಿಸುತ್ತಿದೆ. ಸನ್ಮಾನ್ಯ ಮುಖ್ಯ ಮಂತ್ರಿಗಳು 26 ನೇ ಗಣರಾಜಯೋತ್ಸವದ ದಿನದಂದು " ಸಂವಿಧಾನದ ಜಾಗೃತಿ ಜಾಥಾಗೆ ಅಧಿಕೃತ ಚಾಲನೆ ನೀಡಿರುತ್ತಾರೆ.

ಅದರಂತೆ ಏಕಕಾಲದಲ್ಲಿ ಅದೇ ರೀತಿ ದಿನಾಂಕ: 24 ಮತ್ತು 25ನೇ ಫೆಬ್ರುವರಿ 2024ರಂದು ಸಂವಿಧಾನ ಮತ್ತು ಭಾರತದ ಏಕತಾ ಬೃಹತ್ ಸಮಾವೇಶವನ್ನು ಬೆಂಗಳೂರಿನ ಅರಮನೆ ಮೈದಾನದಲ್ಲಿ ಆಯೋಜಿಸಲಾಗುತ್ತಿದೆ ಈ ಹಿನ್ನೆಲೆಯಲ್ಲಿ ಭಾರತದ ಸಂವಿಧಾನದ ಉದಾತ್ತವಾದ ಆದರ್ಶ ಮೌಲ್ಯಗಳನ್ನು ಸಾರ್ವಜನಿಕವಾಗಿ ತಿಳುವಳಿಕೆ ಮೂಡಿಸುವ ಉದ್ದೇಶದಿಂದ ಆಯೋಜಿಸಿರುವ ಸಂವಿಧಾನದ ಜಾಗೃತಿ ಕಾರ್ಯಕ್ರಮವನ್ನು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಉಲ್ಲೇಖಿತ ಪತ್ರದಲ್ಲಿ (ಪ್ರತಿ ಲಗತ್ತಿಸಿದೆ) ತಿಳಿಸಿದಂತೆ ಆಯೋಜಿಸಲು ರಾಜ್ಯದ ಎಲ್ಲಾ ತಾಂತ್ರಿಕ ಶಿಕ್ಷಣ ಸಂಸ್ಥೆಗಳಲ್ಲಿ ಪ್ರಾಚಾರ್ಯರಿಗೆ ಸೂಚಿಸಲಾಗಿದೆ.

ನಿರ್ದೇಶಕರು

ಇವರಿಗೆ:

1. ರಾಜ್ಯದ ಎಲ್ಲಾ ತಾಂತ್ರಿಕ ಶಿಕ್ಷಣ ಸಂಸ್ಥೆಗಳ ಪ್ರಾಚಾರ್ಯರುಗಳಿಗೆ – ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
2. ರಾಜ್ಯ ಎನ್.ಎಸ್.ಎಸ್ ಅಧಿಕಾರಿ, ರಾಷ್ಟ್ರೀಯ ಸೇವಾ ಯೋಜನಾ ಕೋಶ,ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಬೆಂಗಳೂರು-01
3. ಇ – ಆಡಳಿತ -ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
4. ಕಛೇರಿ ಪ್ರತಿ.

ಕರ್ನಾಟಕ ಸರ್ಕಾರ
ರಾಷ್ಟ್ರೀಯ ಸೇವಾ ಯೋಜನಾ ಕೋಶ,
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

ಸಂಖ್ಯೆ:ಯುಸೇಇ/ರಾಸೇಯೋ/60/2022/2023-24/510

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 16.02.2024

ಇವರಿಗೆ,

ಕಾರ್ಯಕ್ರಮ ಸಂಯೋಜನಾಧಿಕಾರಿಗಳು
ಎಲ್ಲಾ ವಿಶ್ವವಿದ್ಯಾಲಯಗಳು/ ನಿರ್ದೇಶನಾಲಯಗಳು.

ಮಾನ್ಯರೇ,

ವಿಷಯ: ಸಂವಿಧಾನ ಕುರಿತು ಜಾಗೃತಿ ಜಾಥಾ, ಸಂವಾದ ಹಾಗೂ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಕುರಿತು.

ಉಲ್ಲೇಖ: 1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರ ಅರೆ ಸರ್ಕಾರಿ ಪತ್ರ ಸಂಖ್ಯೆ: ಅ. ಸ ಪ ಸಂ:ಅಮುಕಾ ಅಆ:48:2024, ದಿನಾಂಕ: 15.02.2024.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರ ಅರೆ ಸರ್ಕಾರಿ ಪತ್ರ ಸಂಖ್ಯೆ: ಅ. ಸ ಪ ಸಂ:ಅಮುಕಾ ಅಆ:49:2024, ದಿನಾಂಕ: 15.02.2024.

*****

ಮೇಲ್ಕಂಡ ವಿಷಯ ಮತ್ತು ಉಲ್ಲೇಖಗಳಿಗೆ ಸಂಬಂಧಿಸಿದಂತೆ, ಭಾರತದ ಸಂವಿಧಾನ ಅಂಗೀಕರಿಸಿಕೊಂಡು 75ನೇ ವರ್ಷದ ಆಚರಣೆಯ ಪ್ರಯುಕ್ತ ಕರ್ನಾಟಕ ಸರ್ಕಾರವು, ಸಮಾಜ ಕಲ್ಯಾಣ ಇಲಾಖೆ ಹಾಗೂ ಇತರೆ ಇಲಾಖೆಗಳ ಸಹಭಾಗಿತ್ವದಲ್ಲಿ ಪ್ರತಿ ನಗರ, ಗ್ರಾಮ, ಹಳ್ಳಿ, ಹಾಡಿ, ಹಟ್ಟಿ, ಬಡಾವಣೆಗಳಲ್ಲಿ ಸಂವಿಧಾನದ ಬಗ್ಗೆ ಅರಿವು ಮೂಡಿಸುವ ಉದ್ದೇಶದಿಂದ "ಸಂವಿಧಾನ ಜಾಗೃತಿ ಜಾಥ" ದೊಂದಿಗೆ "ಸಂವಿಧಾನ ಮತ್ತು ಭಾರತದ ಐಕ್ಯತ ಸಮಾವೇಶ" ವನ್ನು ಆಯೋಜಿಸುತ್ತಿದೆ. ಸನ್ಮಾನ್ಯ ಮುಖ್ಯಮಂತ್ರಿಗಳು 26ನೇ ಜನವರಿ 2024ರ ಗಣರಾಜ್ಯೋತ್ಸವ ದಿನದಂದು "ಸಂವಿಧಾನ ಜಾಗೃತಿ ಜಾಥಗೆ ಅಧಿಕೃತವಾಗಿ ಚಾಲನೆ ನೀಡಿರುತ್ತಾರೆ.

ಅದರಂತೆ ಏಕಕಾಲದಲ್ಲಿಅದೇ ರೀತಿ ದಿನಾಂಕ 24 ಮತ್ತು 25ನೇ ಫೆಬ್ರುವರಿ 2024 ರಂದು ಸಂವಿಧಾನ ಮತು ಭಾರತದ ಏಕತಾ ಬೃಹತ್ ಸಮಾವೇಶವನ್ನು ಬೆಂಗಳೂರಿನ ಅರಮನೆ ಮೈದಾನದಲ್ಲಿ ಆಯೋಜಿಸಲಾಗುತ್ತಿದೆ. ಈ ಹಿನ್ನಲೆಯಲ್ಲಿ, ಭಾರತದ ಸಂವಿಧಾನದ ಉದಾತ್ತವಾದ ಆದರ್ಶ ಮತ್ತು ಮೌಲ್ಯಗಳನ್ನು ಸಾರ್ವಜನಿಕವಾಗಿ ತಿಳುವಳಿಕೆ ಮೂಡಿಸುವ ಉದ್ದೇಶದಿಂದ ಆಯೋಜಿಸಿರುವ ಸಂವಿಧಾನ ಜಾಗೃತಿ ಕಾರ್ಯಕ್ರಮವನ್ನು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಆಯೋಜಿಸಲು ಉದ್ದೇಶಿಸಲಾಗಿದೆ.

ಆದ್ದರಿಂದ, **ತಮ್ಮ ವಿಶ್ವವಿದ್ಯಾಲಯ/ನಿರ್ದೇಶನಾಲಯಗಳ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಕಾಲೇಜುಗಳಲ್ಲಿ ಈ ಕೆಳಗಿನ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕೆಂದು ಹಾಗೂ ಸದರಿ ಜಾಗೃತಿ ಕಾರ್ಯಕ್ರಮಗಳಲ್ಲಿ ಕಡ್ಡಾಯವಾಗಿ ಎಲ್ಲಾ ಎನ್. ಎಸ್. ಎಸ್. ಸ್ವಯಂ ಸೇವಕ-ಸೇವಕಿಯರು ಮತ್ತು ವಿದ್ಯಾರ್ಥಿಗಳನ್ನು ಸಕ್ರಿಯವಾಗಿ ಭಾಗವಹಿಸುವುದರ ಮೂಲಕ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ತಮ್ಮ ಸಹಕಾರವನ್ನು ಕೋರಲಾಗಿದೆ.**

ಜಾಗೃತಿ ಕಾರ್ಯಕ್ರಮಗಳು:

ಅ) ಸಂವಿದಾನ ಜಾಗೃತಿ ಜಾಥಾ (2024ರ ಜನವರಿ 26ರಿಂದ ಫೆಬ್ರುವರಿ 23ರವರೆಗೆ)
ಆ) ಸಂವಿಧಾನ ಕುರಿತ ಸಂವಾದ ( ಫೆಬ್ರುವರಿ 24 ಮತ್ತು 25 ರಂದು)
ಇ) ಸಂವಿಧಾನ ಜಾಗೃತಿ ಸಮಾವೇಶ (ಫೆಬ್ರುವರಿ 24 ಮತ್ತು 25ರಂದು)

ಸೂಚನೆ: **ಮೇಲಿನ ಜಾಗೃತಿ ಕಾರ್ಯಕ್ರಮಗಳ ಛಾಯಚಿತ್ರಗಳೊಂದಿಗಿನ ವರದಿಯನ್ನು ರಾಜ್ಯ ಎನ್. ಎಸ್. ಎಸ್. ಕೋಶಕ್ಕೆ ಕಡ್ಡಾಯವಾಗಿ ಸಲ್ಲಿಸುವುದು**

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

(ಡಾ.ಪ್ರತಾಪ್ ಲಿಂಗಯ್ಯ)
ರಾಜ್ಯ ಎನ್.ಎಸ್.ಎಸ್.ಅಧಿಕಾರಿ,
ರಾಷ್ಟ್ರೀಯ ಸೇವಾ ಯೋಜನಾ ಕೋಶ,
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

ಪ್ರತಿ:
1. ಮಾನ್ಯ ಸರ್ಕಾರದ ಅಪರ ಕಾರ್ಯದರ್ಶಿಗಳು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಕರ್ನಾಟಕ ಸರ್ಕಾರ
2. ಪ್ರಾದೇಶಿಕ ನಿರ್ದೇಶಕರು, ಎನ್.ಎಸ್.ಎಸ್. ಪ್ರಾದೇಶಿಕ ಕಛೇರಿ, ಭಾರತ ಸರ್ಕಾರ, ಬೆಂಗಳೂರು.